**<u>ದಿನಾಂಕಃ 16.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎ.ಎನ್.ಎಸ್. ವಕೀಲರಿಂದಃ</u>**

1) ನಿಪಿ.12 ರಂತೆ ಇರುವ ಕ್ರಯ ಪತ್ರವನ್ನು ಅಮೀರ್.ಬಿ ಮತ್ತು ಇತರರಿಗೆ ಅಬ್ದುಲ್ ಸತ್ತರ್ ರವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂ.124/1, 124/2 ರ ಜಮೀನುಗಳ ಮೂಲ ವಾರಸುದಾರರು ಅಮೀರ್.ಬಿ, ಫಾತಿಮಾ.ಬಿ ಮತ್ತು ಇತರರು ಆಗಿರುತ್ತಾರೆ ಎಂಬ ಬಗ್ಗೆ ನಿಪಿ.15 ರಲ್ಲಿ ನಮೂದು ಆಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಪಕ್ಕದಲ್ಲಿ ದರ್ಗಾ ಇದೆ ಎಂದರೆ ಸರಿ. ದಾವಾ ಸ್ವತ್ತು ದರ್ಗಾ ಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೂಲ ಸರ್ವೆ ನಂ.124 ಎಂದರೆ ಸರಿ. ನಿಪಿ.2 ಮತ್ತು 3 ರ ದಾಖಲೆಗಳಲ್ಲಿ ಸರ್ವೆ ನಂಬರ್ 124 ರಲ್ಲಿ ಕೃಷಿ ಭೂಮಿ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ದಿಃ 27.03.1997 ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಅಲ್ಲಿ ತರಕಾರಿಗಳನ್ನು ಬೆಳೆಯುತ್ತಿದ್ದೆನು. ನಾನು ಸಲ್ಲಿಸಿರುವ ದಾಖಲೆಗಳಲ್ಲಿ ದಾವಾ ಸ್ವತ್ತಿನಲ್ಲಿ ಕೃಷಿ ಕಾರ್ಯ ಮಾಡಿದ್ದೇನೆ ಎಂದು ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ತಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿಯೇ ಸರ್ವೆ ನಂಬರ್ 124 ರಲ್ಲಿ ನಿವೇಶನಗಳನ್ನು ಮಾಡಿದ್ದರು ಎಂದು ನುಡಿಯುತ್ತಾರೆ. ಆ ರೀತಿ ನಿವೇಶನಗಳ ಲೆಕ್ಕದಲ್ಲಿ ಮಾರಾಟ ಮಾಡಿ ಸ್ವತ್ತನ್ನು ಅನ್ಯಸಂಕ್ರಮಣ ಮಾಡಿಕೊಳ್ಳಲು ಅವಕಾಶ ಇರುತ್ತದೆ. ನಾನು ದಾವಾ ಸ್ವತ್ತಿನ ಸಂಬಂಧ ನಿಪಿ.8 ರಲ್ಲಿ ತಿಳಿಸಿದಂತೆ 2015-16 ರಲ್ಲಿ ಭೂಮಿ ತೆರಿಗೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ. ಅದೇ ರೀತಿ 2006-07 ರಲ್ಲಿಯೂ ಸಹ ಭೂಮಿ ತೆರಿಗೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ.

2) ಸಾಕ್ಷಿಯು ಒಂದು ಪಹಣಿ ಪತ್ರಿಕೆಯನ್ನು ನೋಡಿ ಅದು ಪ್ರಸ್ತುತ ದಾವಾ ಸ್ವತ್ತಿಗೆ ಸೇರಿದ ಪಹಣಿ ಪತ್ರಿಕೆ ಆಗಿದೆ ಎಂದು ಗುರುತಿಸಿದ ಕಾರಣ ಸದರಿ ಪಹಣಿ ಪತ್ರಿಕೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಡಿ ಆದ ನಂತರ ದಾವಾ ಸ್ವತ್ತು ಸರ್ವೆ ನಂ. 124/3ಎ ಗೆ ಹೊಸದಾಗಿ ಸರ್ವೆ ನಂ.124/9 ಎಂದು ನೀಡಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿಗೆ ಪೋಡಿ ಆಗಿದ್ದು ಅದು ಎಂ.ಆರ್.ನಂ.ಟಿ8/2019-2020 ರಂದು ಆಗಿದೆ ಎಂದರೆ ಸರಿ. ಸಾಕ್ಷಿಯು

ಎಂ.ಆರ್.ನಂ.ಟಿ8/2019-2020 ಇದರ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು.

3) ದಾವಾ ಸ್ವತ್ತು ಸರ್ವೆ ನಂ. 124/2ಬಿ ಗೆ ಹೊಸದಾಗಿ ಸರ್ವೆ ನಂ.124/8 ಎಂದು ನೀಡಿರುವುದಾಗಿ ನುಡಿಯುತ್ತಾರೆ. ಈ ಹಿಂದೆ ಸರ್ವೆ ನಂ.124/2ಬಿ ನಲ್ಲಿ ನನ್ನ ರೀತಿ ಇನ್ನಿತರೆ ಜನರೂ ಸಹ ಸ್ವತ್ತನ್ನು ಖರೀದಿ ಮಾಡಿದ್ದು, ಪೋಡಿ ಆದ ನಂತರ ಸದರಿಯವರ ಹೆಸರೂ ಸಹ ಸರ್ವೆ ನಂ.124/8 ರ ಪಹಣಿಪತ್ರಿಕೆ ಮತ್ತು ಮ್ಯುಟೇಶನ್ ಪ್ರತಿಯಲ್ಲಿ ಬರುತ್ತಿದೆ ಎಂದರೆ ಸರಿ. ಸಾಕ್ಷಿಯು ಸರ್ವೆ ನಂಬರ್ 124/8, 124/2ಎ, 124/2ಬಿ, 124/3ಎ ಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.3 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಆರ್.ನಂ.ಟಿ9/2019-2020 ಇದರ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು. ಸಾಕ್ಷಿಯು ಸರ್ವೆ ನಂ.124/8 ಮತ್ತು 124/9 ರ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.8 ಮತ್ತು 9 ಎಂದು ಗುರುತಿಸಲಾಯಿತು. ಅದೇ ರೀತಿ ದಿಃ 16.08.2025 ರಂದು ವಿತರಿಸಿರುವ ಎಂ.ಆರ್.ನಂ.ಟಿ8/2019-2020 ಮತ್ತು ಎಂ.ಆರ್.ನಂ.ಟಿ9/2019-2020 ಇವುಗಳ ದೃಢೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.10 ಮತ್ತು 11 ಎಂದು ಗುರುತಿಸಲಾಯಿತು. ನಿಡಿ.8 ಮತ್ತು 9 ರ ಪಹಣಿ ಪತ್ರಿಕೆಗಳನ್ನು ಕೃಷಿ ಮಾಡಿಲ್ಲ ಎಂದು ಉಲ್ಲೇಖ ಇದೆ ಎಂದರೆ ಸರಿ.

4) ನೀವು ದಾವಾ ಸ್ವತ್ತನ್ನು ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಅದರಲ್ಲಿ ಯಾವುದೇ ರೀತಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ತಾನು ಅದರಲ್ಲಿ ಮೊದಲಿನಿಂದಲೂ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದು ಈ ವರ್ಷ ಅದರಲ್ಲಿ ಯಾವುದೇ ಬೆಳೆ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಒಂದು ಭಾವಚಿತ್ರವನ್ನು ನೋಡಿ ಅದು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಎಂದು ನುಡಿದಿದ್ದು ಅದನ್ನು ನಿಡಿ.12 ಎಂದು ಗುರುತಿಸಲಾಯಿತು. ನಿಡಿ.12 ರ ಪ್ರಕಾರಣ ಪ್ರಸ್ತುತ ದಾವಾ ಸ್ವತ್ತಿನಲ್ಲಿ ರಸ್ತೆ ಇದೆ ಎಂದರೆ ಸಾಕ್ಷಿಯು ಆ ರೀತಿ ರಸ್ತೆ ಮಾಡಿದ್ದ ಕಾರಣ ತಾನು ದೂರು ನೀಡಿದ್ದಾಗಿ ನುಡಿಯುತ್ತಾರೆ. ಸಾಕ್ಷಿಯು ಸದರಿ ರಸ್ತೆಯನ್ನು ಈ ದಾವೆ ಹೂಡಿದ ನಂತರ ಮಾಡಿದ್ದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಸಾಕಷ್ಟು ವರ್ಷಗಳಿಂದ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಒಂದು ಭಾವಚಿತ್ರವನ್ನು ನೋಡಿ ಅದರಲ್ಲಿ ಕಾಣುವ ಜಾಗ ತನಗೆ ಸೇರಿದ ದಾವಾ ಸ್ವತ್ತು ಎಂದು ನುಡಿದಿದ್ದು ಸದರಿ ಭಾವಚಿತ್ರವನ್ನು ನಿಡಿ.13 ಎಂದು ಗುರುತಿಸಲಾಯಿತು.

5) ದಾವಾ ಸ್ವತ್ತನ್ನು ನಾನು ಖರೀದಿ ಮಾಡಿದ ದಿನದಿಂದಲೂ ಅಲ್ಲಿ ಯಾವುದೇ ರೀತಿ ತರಕಾರಿ ಬೆಳೆಗಳನ್ನು ಬೆಳೆದಿಲ್ಲ ಮತ್ತು ಆ ಸ್ವತ್ತಿನ ಸ್ವಾಧೀನವನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಹೂಡುವ ಕಾಲಕ್ಕೆ ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದಿದ್ದರೂ ಸಹ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜೊತೆ ನೂರಾರು ಜನ ಸಹಚರರನ್ನು ಸೇರಿಸಿಕೊಂಡು ನಾನು ದಾವಾ ಸ್ವತ್ತಿನ ಬಳಿ ಬಂದಾಗಲೆಲ್ಲಾ ಅಥವಾ ಹೋದರೆ ಬಂದು ಸೇರಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ದಾವಾ ಸ್ವತ್ತಿಗೆ ಹೋದಾಗ ಅಲ್ಲಿ ಜನರು ಬಂದು ಸೇರಿ ಯಾವಾಗಲೂ ನನಗೆ ತೊಂದರೆ ಕೊಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತನ್ನು ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಸ್ವಾಧೀನದಲ್ಲಿ ಇರುವುದಾಗಿ ತೋರಿಸಲು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ತಾನು ಪ್ರತಿ ಬಾರಿ ದಾವಾ ಸ್ವತ್ತಿಗೆ ಹೋಗಿ ಬರುವುದಾಗಿ ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಬಳಿ ಹೋಗಿ ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳಲು ಹೋಗಿ ವಿಫಲನಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಾನೇ ಸ್ವಾಧೀನದಲ್ಲಿ ಇದ್ದು ಅಲ್ಲಿ ಕೆಲಸ ಮಾಡಲು ಹೋದಾಗ ಪ್ರತಿವಾದಿಗಳು ತೊಂದರೆ ಕೊಡುತ್ತಿರುವುದಾಗಿ ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಹೂಡುವ ಮೂಲಕ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಇರುವ ಪ್ರತಿವಾದಿಗಳು ಸಹ ಗಲಾಟೆ ಮಾಡಿದ್ದರು ಅವರನ್ನು ಹೊರತುಪಡಿಸಿ ಇತರೆಯವರೂ ಸಹ ಅವರೊಂದಿಗೆ ಗಲಾಟೆ ಮಾಡಿರುತ್ತಾರೆ. ಪ್ರತಿವಾದಿಗಳು ಯಾವತ್ತೂ ಸಹ ದಾವಾ ಸ್ವತ್ತಿನ ಬಳಿಗೆ ಬಂದಿಲ್ಲ ಮತ್ತು ದಾವಾ ಸ್ವತ್ತಿನ ಮೇಲೆ ಇರುವ ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**